ಬಡ್ತಿಯಲ್ಲಿ ತಾರತಮ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 88 (233)
ಸದಸ್ಯರ ಹೆಸರು : ಶೀ ಮುನಿರಾಜು ಎಸ್ (ದಾಸರಹಳ್ಳಿ)
ಉತ್ತರಿಸುವ ಸಚಿವರು : ಡಾ. ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆಗಳು:

ಅ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಬೋಧಕೇತರ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡುವಿಕೆಯಲ್ಲಿ ತಾರತಮ್ಯ ನೀತಿ ಅನುಸರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪ್ರಸ್ತುತ ಯಾವ ಹುದ್ದೆಗಳಿಂದ ನಂತರದ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ; ಮುಂಬಡ್ತಿಗೆ ಪರಿಗಣಿಸಿರುವ ಮಾನದಂಡಗಳೇನು; ಈಗಾಗಲೇ ಎಷ್ಟು ಸಿಬ್ಬಂದಿಗಳಿಗೆ ಮುಂಬಡ್ತಿಯನ್ನು ಯಾವಾಗಿನಿಂದ ನೀಡಲಾಗಿರುತ್ತದೆ; ಮುಂಬಡ್ತಿಗೆ ಇನ್ನೂ ಬಾಕಿ ಇರುವ ಸಿಬ್ಬಂದಿಗಳೆಷ್ಟು (ವಿವರ ನೀಡುವುದು);

ಇ) ಈಗಾಗಲೇ ಎಲ್ಲಾ ನೌಕರರನ್ನು ಮುಂಬಡ್ತಿಗೆ ಪರಿಗಣಿಸಿ ಕೇವಲ ಬೆರಳೆಣಿಕೆಯಷ್ಟು ಸಿಬ್ಬಂದಿಗಳಿಗೆ ಮಾತ್ರವೇ ಮುಂಬಡ್ತಿ ನೀಡದಿರಲು ಕಾರಣಗಳೇನು; ಮುಂಬಡ್ತಿ ನಿರೀಕ್ಷೆಯಲ್ಲಿರುವ ಸಿಬ್ಬಂದಿಗಳು ಯಾರು ಯಾರು; (ಹೆಸರು, ವೃಂದವಾರು ಹುದ್ದೆ ವಿವರ ನೀಡುವುದು);

ಈ) ಮುಂಬಡ್ತಿಗಾಗಿ ಇರುವ ಹುದ್ದೆಗಳೆಷ್ಟು; ಇದರಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಯಾವಾಗಿನಿಂದ ಮುಂಬಡ್ತಿಗಾಗಿ ಖಾಲಿ ಇವೆ. ಈ ಹುದ್ದೆಗಳು ಖಾಲಿ ಇದ್ದಾಗ್ಯೂ ಸಹ ಮುಂಬಡ್ತಿ ನೀಡದಿರುವುದರಿಂದ ಬಡ್ತಿ ನಿರೀಕ್ಷೆಯಲ್ಲಿರುವವರುಗಳಿಗೆ ವಂಚನೆ ಮಾಡಿದಂತಾಗುವುದಿಲ್ಲವೇ?

ಉ) ಹಾಗಿದ್ದಲ್ಲಿ, ಇವರುಗಳಿಗೆ ಯಾವಾಗ ಮುಂಬಡ್ತಿ ನೀಡಲಾಗುತ್ತದೆ; ವಿಳಂಬಕ್ಕೆ ಕಾರಣಗಳೇನು; ಇದಕ್ಕೆ ಕಾಲಮಿತಿ ನಿಗದಿಪಡಿಸಲಾಗಿದೆಯೇ; ಕೂಡಲೇ ಮುಂಬಡ್ತಿ ಹುದ್ದೆ ಭರ್ತಿಗೆ

ಸರ್ಕಾರ ಕ್ರಮ ಕೈಗೊಳ್ಳುವುದೇ? (ಪೂರ್ಣ ವಿವರ ನೀಡುವುದು)

ಉತ್ತರಗಳು:

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ವಿಶ್ವವಿದ್ಯಾನಿಲಯವು ಕಾಲ ಕಾಲಕ್ಕೆ ಬಡ್ತಿಯ ಹುದ್ದೆಗಳನ್ನು ಅರ್ಹ ಸಿಬ್ಬಂದಿಗಳಿಗೆ ಬಡ್ತಿ ನೀಡುತ್ತಿದ್ದು, ಹುದ್ದೆಗಳ ಲಭ್ಯತೆಯನ್ನು ಆಧರಿಸಿಯೇ ಪದೋನ್ನತಿ ನೀಡುತ್ತಾ ಬರಲಾಗುತ್ತಿದೆ. ಮುಂಬಡ್ತಿ ನಿರೀಕ್ಷೆಯಲ್ಲಿರುವ ನೌಕರರ ಪಟ್ಟಿ ಕೆಳಕಂಡಂತಿದೆ. (Provisional) ಈ ನೌಕರರುಗಳ ಪದೋನ್ನತಿಯು ಅವರುಗಳ ಸೇವಾ ಅನುಭವ ಇತರೆ ಮಾನದಂಡಗಳ ಪರಿಶಿಲನೆಗೆ ಒಳಪಟ್ಟಿರುತ್ತದೆ).

1. ಹಿರಿಯ ಸಹಾಯಕ ಹುದ್ದೆಗೆ – ಶ್ರೀ ಎಲ್.ಜೆ.ರಘು, ಪ್ರ.ದ.ಗು.
2. ಪರಿಚಾರಕ ಹುದ್ದೆಗೆ –
    1. ಶ್ರೀ. ಆರ್. ವೆಂಕಟೇಶ್ – ಸ್ವೀಪರ್
    2. ಶ್ರೀ ಎಂ. ಶಿವಪ್ರಕಾಶ್ – ಸೇವಕ
    3. ಶ್ರೀಮತಿ ಮಂಜುಳಾ ಎನ್ – ಸೇವಕಿ
    4. ಶ್ರೀಮತಿ ಭಾಗ್ಯಲಕ್ಷ್ಮಿ ಕೆ. – ಸ್ವೀಪರ್
    5. ಶ್ರೀಮತಿ ಶೋಭಾ ಎನ್ – ಸೇವಕಿ
    6. ಶ್ರೀ ನಿಂಗನಾಕ – ಸ್ವೀಪರ್
    7. ಶ್ರೀ ಅನ್ವರ್‌ಭಾಷಾ ಸಾಬ್ – ಸೇವಕ
    8. ಶ್ರೀಮತಿ ತಾಯಮ್ಮ – ಸೇವಕಿ

ಈ) ಮುಂಬಡ್ತಿಗೆ ಇರುವ ಹುದ್ದೆಗಳ ಪೈಕಿ

1. ಅಧೀಕ್ಷಕ ಹುದ್ದೆ – 10
2. ಹಿರಿಯ ಸಹಾಯಕ ಹುದ್ದೆಗೆ – 01
3. ಶೀಘ್ರಲಿಪಿಗಾರರು – 01
4. ಪರಿಚಾರಕ – 08 ಹುದ್ದೆಗಳು

ಖಾಲಿ ಇರುತ್ತವೆ. ಇವುಗಳಲ್ಲಿ ಅಧೀಕ್ಷಕ ಹುದ್ದೆಗೆ ಹಾಗೂ

ಶೀಘ್ರಲಿಪಿಗಾರ ಹುದ್ದೆಗೆ ಅರ್ಹ ನೌಕರರುಗಳ ಪ್ರಸ್ತುತ ಇಲ್ಲದಿರುವ ಕಾರಣ ಪ್ರಸ್ತುತ ಖಾಲಿ ಉಳಿದಿವೆ.

ಉಳಿದಂತೆ ಹಿರಿಯ ಸಹಾಯಕ ಹುದ್ದೆಯ ಪದೋನ್ನತಿಗೆ ಸದ್ಯದಲ್ಲಿಯೇ ಇಲಾಖಾ ಮುಂಬಡ್ತಿ ಸಮಿತಿಯನ್ನು ಕರೆಯಲಾಗುವುದು ಹಾಗೆಯೇ ಪರಿಚಾರಕ ಹುದ್ದೆಗಳಿಗೆ ವಿಶ್ವವಿದ್ಯಾಲಯ ನಾಲ್ಕನೇ ದರ್ಜೆ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು.

ಊ) ಶೀಘ್ರವಾಗಿ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 89 (409)
ಸದಸ್ಯರ ಹೆಸರು : ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)
ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆಗಳು:

ಅ) ಸಿಂಧನೂರು ತಾಲ್ಲೂಕಿಗೆ ರಾಜೀವ್‌ಗಾಂಧಿ ಸಬ್‌ಮಿಷನ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆಯ ಮಂಜೂರಾತಿ ದೊರಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯಿಂದ ಯಾವ ಯಾವ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ (ವಿವರ ನೀಡುವುದು);

ಇ) ಸದರಿ ಯೋಜನೆಯಡಿ ತಾಲ್ಲೂಕಿನ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಲಾಗಿರುತ್ತದೆ (ಪೂರ್ಣ ಮಾಹಿತಿ ನೀಡುವುದು)

ಈ) ಈ ಯೋಜನೆಯಡಿ ಈಗಾಗಲೇ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡದೆ ಬಾಕಿ ಉಳಿದಿರುವ ಗ್ರಾಮಗಳೆಷ್ಟು? (ವಿವರ ನೀಡುವುದು);